# <u>ಪತ್ರಿಕಾ ಪ್ರಕಟಣೆ</u>

ವಿಷಯ: (1) ವೃತ್ತಿ ತೆರಿಗೆ ಪಾವತಿಸಲು ಕಾಲಾವಕಾಶ ವಿಸ್ತರಣೆ ಕುರಿತು.
(2) ಮೌಲ್ಯವರ್ಧಿತ ತೆರಿಗೆ ಹಾಗೂ ಪ್ರವೇಶ ತೆರಿಗೆಯಡಿಯಲ್ಲಿ ಕಾಲಾವಕಾಶ ವಿಸ್ತರಣೆ ಕುರಿತು

ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ, 1976ರ ಪ್ರಕರಣ 10ರ ಅನ್ವಯ ಎನ್‌ರೋಲ್‌ಮೆಂಟ್ ಪಡೆದ ಪ್ರತಿಯೊಬ್ಬ ವ್ಯಕ್ತಿಯು 2021-22ನೇ ಸಾಲಿಗೆ ಸಂಬಂಧಿಸಿದ ವೃತ್ತಿ ತೆರಿಗೆಯನ್ನು ದಿನಾಂಕ: 30-04-2021 ರೊಳಗಾಗಿ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ ,2003 ಹಾಗೂ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ,1979 ಗಳಡಿಯಲ್ಲಿ 2016-17ನೇ ಸಾಲಿಗೆ ಸಂಬಂಧಿಸಿದ ಕರನಿರ್ಧರಣೆಗಳನ್ನು ಮತ್ತು ಮರು ಕರನಿರ್ಧರಣೆ , ಏಪ್ರಿಲ್ 30, 2021ಕ್ಕೆ ಅಂತ್ಯಕ್ಕೆ ಪೂರ್ಣ ಗೊಳಿಸಬೇಕಾಗಿರುತ್ತದೆ.

ಕೋವಿಡ್-19 ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿರುವುದರಿಂದ, ಸರ್ಕಾರವು ವ್ಯಾಪಾರೋದ್ಯಮ ಸಂಸ್ಥೆಗಳ ಚಟುವಟಿಕೆಗಳಿಗೆ ನಿರ್ಬಂಧ ಹೇರಿರುವ ಹಿನ್ನೆಲೆಯಲ್ಲಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿದೆ:-

(1) ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ, 1976ರ ಪ್ರಕರಣ 10ರ ಅನ್ವಯ ಎನ್‌ರೋಲ್‌ಮೆಂಟ್ ಪಡೆದ ವ್ಯಕ್ತಿಯು 2021-22ನೇ ಸಾಲಿಗೆ ವೃತ್ತಿ ತೆರಿಗೆ ಮತ್ತು ತೆರಿಗೆ ವಿವರಣಾ ಪಟ್ಟಿ ಪಾವತಿಸಲು ವಿಸ್ತರಿಸಿದ ಕೊನೆಯ ದಿನಾಂಕ: **30-06-2021** ರವರೆಗೆ ವಿಸ್ತರಿಸಲಾಗಿದೆ.

(2) ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ, 2003 , ಕೇಂದ್ರ ಮಾರಾಟ ತೆರಿಗೆ ಕಾಯ್ದೆ ,1956 ಮತ್ತು ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ,1979 ಗಳಡಿಯಲ್ಲಿ 2016-17ನೇ ಸಾಲಿಗೆ ಸಂಬಂಧಿಸಿದ ಕರನಿರ್ಧರಣೆಗಳನ್ನು ಮತ್ತು ಮರು ಕರನಿರ್ಧರಣೆಯ ಕಾಲಮಿತಿಯನ್ನು **ಮೂರು ತಿಂಗಳ ಕಾಲ** 31-07-2021 ರವರೆಗೆ ವಿಸ್ತರಿಸಲಾಗಿದೆ.

31.5.2021

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು